# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 862 |
| 2 | ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್.ಎನ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 13-03-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಆಸ್ತಿಗಳೆಷ್ಟು; ಈ ಪೈಕಿ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳ ಸಂಖ್ಯೆ ಎಷ್ಟು; ತೆರಿಗೆ ವ್ಯಾಪ್ತಿಯಿಂದ ಹೋಗಿರುವ ಕಾರಣ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಗುತ್ತಿರುವ ನಷ್ಟ ಎಷ್ಟು; ಈ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಕೈಗೊಂಡಿರುವ ಕ್ರಮಗಳೇನು; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು) | • ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 22,07,740 ಸ್ವತ್ತುಗಳು ಆಸ್ತಿತೆರಿಗೆ ವ್ಯಾಪ್ತಿಯಲ್ಲಿರುತ್ತದೆ. **ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.**<br>• ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಅಂದಾಜು 5 ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಯಿಂದ ಹೊರಗಿರಬಹುದು ಮತ್ತು ಅಂತಹ ಆಸ್ತಿಗಳಿಂದ ವರ್ಷಕ್ಕೆ ಸುಮಾರು 500 ಕೋಟಿ ತೆರಿಗೆ ಹೆಚ್ಚುವರಿಯಾಗಬಹುದಾಗಿ ಅಂದಾಜಿಸಲಾಗಿದೆ.<br>• ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಜಾಲದಿಂದ ಹೊರಗಿರುವ ಆಸ್ತಿಗಳ ಸಮೀಕ್ಷೆಯನ್ನು ಜಿಪಿಎಸ್ ಮೊಬೈಲ್ ಅಪ್ಲೀಕೇಷನ್ ಮೂಲಕ ಗುರುತಿಸಲಾಗಿರುತ್ತದೆ. ಇದಲ್ಲದೇ, ಆಸ್ತಿತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಸ್ವತ್ತಿನ ಮಾಲೀಕರು / ನಾಗರಿಕರಿಗೆ ಆನ್‌ಲೈನ್‌ನಲ್ಲಿಯೇ ಆಸ್ತಿತೆರಿಗೆಯನ್ನು ಸ್ವಯಂ ಘೋಷಿಸಿ ಪಾವತಿಸಲು ತಂತ್ರಾಂಶವನ್ನು ಸಿದ್ದಪಡಿಸಲಾಗಿರುತ್ತದೆ. |
| ಆ) | ಕಳೆದ 5 ವರ್ಷದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸದಿರುವ ಆಸ್ತಿಗಳೆಷ್ಟು; ಆಸ್ತಿ ತೆರಿಗೆ ವಸೂಲಿಗೆ ಕೈಗೊಂಡಿರುವ ಕ್ರಮಗಳೇನು; ತೆರಿಗೆ ಪಾವತಿಸದ ಎಷ್ಟು ಆಸ್ತಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೆಸರಿಗೆ ಸೇರಿಸಲಾಗಿದೆ; (ವಿವರ ನೀಡುವುದು) | ಕಳೆದ ಐದು ವರ್ಷಗಳಿಂದ ಸುಮಾರು 85,880 ಸ್ವತ್ತುಗಳಿಂದ ಆಸ್ತಿತೆರಿಗೆ ಬಾಕಿ ಇರುವುದಾಗಿ ಅಂದಾಜಿಸಲಾಗಿದೆ. ಆಸ್ತಿತೆರಿಗೆ ಪಾವತಿಸದೇ ಬೇ-ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ಬಿಬಿಎಂಪಿ ಕಾಯ್ದೆ 2020ರ ಪ್ರಕರಣ 156 ಅನ್ವಯ ಸ್ವತ್ತುಗಳಿಗೆ ನಿಯಮಾನುಸಾರ ಬೀಗಮುದ್ರೆ ಹಾಕಿ, ಚರ, ಸ್ಥಿರ ಅಥವಾ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. ಆಸ್ತಿತೆರಿಗೆ ಬೇ-ಬಾಕಿ ಉಳಿಸಿಕೊಂಡಿರುವ ಪ್ರಕರಣ ಪೈಕಿ 84370 ಪ್ರಕರಣಗಳಲ್ಲಿ ಅಟ್ಯಾಚ್‌ಮೆಂಟ್ ವಾರೆಂಟ್‌ನ್ನು ಜಾರಿ ಮಾಡಲಾಗಿರುತ್ತದೆ **ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.** |

| | | |
|---|---|---|
| ಇ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಪ್ರತಿಷ್ಠಿತ ಮಾಲ್‌ಗಳು ತೆರಿಗೆ ಬಾಕಿ ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್‌ಗಳು ಯಾವುವು; ವಸೂಲಾಗಬೇಕಿರುವ ಬಾಕಿ ಮೊತ್ತ ಎಷ್ಟು; ತೆರಿಗೆ ಬಾಕಿ ವಸೂಲಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು) | ಬಂದಿದೆ.<br>• ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್‌ಗಳ **ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಿದೆ.**<br>• ಆಸ್ತಿತೆರಿಗೆ ಪಾವತಿಸದೇ ಬೇ-ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ಬಿಬಿಎಂಪಿ ಕಾಯ್ದೆ 2020ರ ಪ್ರಕರಣ 156 ಹಾಗೂ ಬಿಬಿಎಂಪಿ (ಆಸ್ತಿತೆರಿಗೆ ವಿಧಿಸುವಿಕೆ, ವಸೂಲಾತಿ ಮತ್ತು ನಿರ್ವಹಣೆ) ನಿಯಮ 2024 ರಲ್ಲಿ ಕಲ್ಪಿಸಲಾಗಿರುವ ನಿಯಮ 7 ಮತ್ತು 9ರ ಪ್ರಕಾರ ಸ್ವತ್ತುಗಳಿಗೆ ನಿಯಮಾನುಸಾರ ಬೀಗಮುದ್ರೆ ಹಾಕಿ, ಚರ, ಸ್ಥಿರ ಅಥವಾ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br>• ಬೇ-ಬಾಕಿ ಆಸ್ತಿತೆರಿಗೆ ಪ್ರಕರಣಗಳಲ್ಲಿ ಸ್ಥಿರಾಸ್ತಿಯನ್ನು ಹರಾಜಿಗೆ ನೋಟೀಸ್ ಜಾರಿ ಮಾಡಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. |
| ಈ) | ತೆರಿಗೆ ವಸೂಲಿ ಸಂಬಂಧ ನ್ಯಾಯಾಲಯದಲ್ಲಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಸರ್ಕಾರಕ್ಕೆ ಹಿನ್ನೆಡೆ ಆಗಲು ಕಾರಣಗಳೇನು? | • ತೆರಿಗೆ ವಸೂಲಿ ಸಂಬಂಧ ಪಾಲಿಕೆಯಿಂದ ನೀಡಲಾದ ನೋಟೀಸ್ / ಆದೇಶಗಳನ್ನು ಪ್ರಶ್ನಿಸಿ ವಿವಿಧ ನ್ಯಾಯಾಲಯದಲ್ಲಿ ದಾಖಲಾಗಿ ವಿಚಾರಣಾ ಹಂತದಲ್ಲಿರುವ ಒಟ್ಟು ಪ್ರಕರಣಗಳು 120.<br>• ದಾಖಲಾಗಿರುವ ಕೆಲವು ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ಪಾಲಿಕೆಗೆ ಆದೇಶ ಹೊರಡಿಸಿ, ಅರ್ಜಿದಾರರಿಗೆ ಸೂಕ್ತ ಕಾಲಾವಕಾಶ ನೀಡಿರುವುದಿಲ್ಲವೆಂದು ಹಾಗೂ ಅವರ ಉಪಸ್ಥಿತಿಯಲ್ಲಿ ಕಟ್ಟಡ / ನಿವೇಶನವನ್ನು ಅಳತೆ ಮಾಡಿಲ್ಲವೆಂದು ತಿಳಿಸಿ ಕಂದಾಯ ಮರುಪರಿಶೀಲನೆಗೆ ಆದೇಶಿಸಲಾಗಿರುತ್ತದೆ.<br>• ಮಾನ್ಯ ನ್ಯಾಯಾಲಯವು ಪುನರ್ ಪರಿಶೀಲಿಸಲು ಅವಕಾಶ ನೀಡಿರುವುದರಿಂದ, ಅರ್ಜಿದಾರರಿಗೆ ಪುನಃ ನೋಟೀಸ್ / ಆದೇಶ ಜಾರಿ ಮಾಡಿ, ಕಂದಾಯ ವಸೂಲಿ ಮಾಡಲು ಕ್ರಮವಹಿಸಲಾಗುತ್ತಿರುತ್ತದೆ. ಬಿಬಿಎಂಪಿ ಕಾಯ್ದೆ 2020 ಹಾಗೂ ಬಿಬಿಎಂಪಿ (ಆಸ್ತಿತೆರಿಗೆ ವಿಧಿಸುವಿಕೆ, ವಸೂಲಾತಿ ಮತ್ತು ನಿರ್ವಹಣೆ) ನಿಯಮ 2024ರ ಅಡಿಯಲ್ಲಿ ಡಿಮ್ಯಾಂಡ್ ಮೊತ್ತದ ಶೇ.50 ರಷ್ಟು ಪಾವತಿ ಮಾಡಿ, |

. . .3.

| | | |
|---|---|---|
| | | ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದರಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗುವ ಕೆಲವೊಂದು ಪ್ರಕರಣಗಳಲ್ಲಿ ಶೇ.50 ರಷ್ಟು ಮೊತ್ತವನ್ನು ಪಾವತಿಸಿ, ಮೇಲ್ಮನವಿ ಸಲ್ಲಿಸಿಕೊಳ್ಳಲು ನಿವೇಶನ / ಕಟ್ಟಡದ ಮಾಲೀಕರಿಗೆ ಸೂಚಿಸಿ, ಪ್ರಕರಣಗಳನ್ನು ಇತ್ಯರ್ಥಗೊಳಿಸಿರುತ್ತದೆ. ಮಾನ್ಯ ನ್ಯಾಯಾಲಯದ ಆದೇಶಗಳಂತೆ ಪಾಲಿಕೆಯಲ್ಲಿ ಮೇಲ್ಮನವಿ ವಿಚಾರಣೆ ನಡೆಸಿ ಪರಿಷ್ಕೃತ ಆಸ್ತಿ ತೆರಿಗೆ ಮೊತ್ತವನ್ನು ಪಾವತಿಸಿಕೊಳ್ಳಲಾಗುತ್ತಿರುತ್ತದೆ. |

**ಸಂಖ್ಯೆ: ನಅಇ 97 ಎಂಎನ್‌ಯು 2025**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

ಅನುಬಂಧ-01

## ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿತೆರಿಗೆ ವಿವರ ಹಾಗೂ ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳ ವಿವರ ಈ ಕೆಳಕಂಡಂತಿದೆ

| ಕ್ರಮ ಸಂಖ್ಯೆ | ವಲಯ | ವಿಧಾನ ಸಭಾ ಕ್ಷೇತ್ರದ ಹೆಸರು | ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ತಿಗಳ ಸಂಖ್ಯೆ |
|---|---|---|---|
| 1 | ದಕ್ಷಿಣ | ಬಿ.ಟಿ.ಎಂ ಲೇಔಟ್ | 49958 |
| 2 | | ಪದ್ಮನಾಭನಗರ | 49549 |
| 3 | | ಚಿಕ್ಕಪೇಟೆ | 41705 |
| 4 | | ಜಯನಗರ | 40250 |
| 5 | | ಬಸವನಗುಡಿ | 38943 |
| 6 | | ವಿಜಯನಗರ | 45124 |
| ಒಟ್ಟು | | | 265529 |
| 7 | ಬೊಮ್ಮನಹಳ್ಳಿ | ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ | 120198 |
| 8 | | ಆನೇಕಲ್ ವಿಧಾನಸಭಾ ಕ್ಷೇತ್ರ | 8916 |
| 9 | | ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ | 205125 |
| ಒಟ್ಟು | | | **334239** |
| 10 | ರಾ.ರಾ.ನಗರ | ರಾಜರಾಜೇಶ್ವರಿನಗರ | 119089 |
| 11 | | ಯಶವಂತಪುರ | 174933 |
| ಒಟ್ಟು | | | 294022 |
| 12 | ಮಹದೇವಪುರ | ಮಹದೇವಪುರ | 279184 |
| 13 | | ಕೆ.ಆರ್.ಪುರ | 157056 |
| ಒಟ್ಟು | | | 436240 |
| 14 | ದಾಸರಹಳ್ಳಿ | ದಾಸರಹಳ್ಳಿ | 83491 |

| ಕ್ರಮ ಸಂಖ್ಯೆ | ವಲಯ | ವಿಧಾನ ಸಭಾ ಕ್ಷೇತ್ರದ ಹೆಸರು | ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ತಿಗಳ ಸಂಖ್ಯೆ |
|---|---|---|---|
| ಒಟ್ಟು | | | 83491 |
| 15 | ಪೂರ್ವ | ಹೆಬ್ಬಾಳ | 52903 |
| 16 | | ಪುಲಿಕೇಶಿನಗರ | 39696 |
| 17 | | ಸರ್ವಜ್ಞನಗರ | 85570 |
| 18 | | ಸಿ.ವಿ ರಾಮನ್‌ನಗರ | 69943 |
| 19 | | ಶಾಂತಿನಗರ | 46278 |
| 20 | | ಶಿವಾಜಿನಗರ | 43845 |
| ಒಟ್ಟು | | | 338235 |
| 21 | ಪಶ್ಚಿಮ | ಗಾಂಧಿನಗರ | 50836 |
| 22 | | ಚಾಮರಾಜಪೇಟೆ | 26862 |
| 23 | | ಗೋವಿಂದರಾಜನಗರ | 44774 |
| 24 | | ರಾಜಾಜಿನಗರ | 30533 |
| 25 | | ಮಹಾಲಕ್ಷ್ಮೀಪುರ | 42336 |
| 26 | | ಮಲೇಶ್ವರಂ | 38036 |
| ಒಟ್ಟು | | | 233377 |
| 27 | ಯಲಹಂಕ | ಯಲಹಂಕ | 62831 |
| 28 | | ಬ್ಯಾಟರಾಯನಪುರ | 159776 |
| ಒಟ್ಟು | | | 222607 |
| ಒಟ್ಟು | | | 2207740 |

ವಿಶೇಷ ಆಯುಕ್ತರು (ಕಂದಾಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| ಅನುಬಂಧ-02 | | | |
|---|---|---|---|
| ಕ್ರಮ ಸಂಖ್ಯೆ | ವಲಯ | ಕಳೆದ 5 ವರ್ಷದಿಂದ ಆಸ್ತಿ ತೆರಿಗೆ ಬೇ-ಬಾಕಿ ಉಳಿಸಿಕೊಂಡಿರುವ ಪ್ರಕರಣಗಳ ಸಂಖ್ಯೆ | ಅಟ್ಯಾಚ್ ಮೆಂಟ್ ವಾರೆಂಟ್ ಜಾರಿಗೊಳಿಸಲಾದ ಪ್ರಕರಣಗಳ ಸಂಖ್ಯೆ |
| 1 | ದಕ್ಷಿಣ | 6612 | 15965 |
| 2 | ಆರ್ ಆರ್ ನಗರ | 16905 | 7899 |
| 3 | ಬೊಮ್ಮನಹಳ್ಳಿ | 8039 | 8407 |
| 4 | ಮಹಾದೇವಪುರ | 31897 | 9927 |
| 5 | ಯಲಹಂಕ | 3173 | 6703 |
| 6 | ಪಶ್ಚಿಮ | 10883 | 14695 |
| 7 | ಪೂರ್ವ | 2603 | 15907 |
| 8 | ದಾಸರಹಳ್ಳಿ | 5768 | 4867 |
| ಒಟ್ಟು | | 85880 | 84370 |

ವಿಶೇಷ ಆಯುಕ್ತರು (ಕಂದಾಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| ಅನುಬಂಧ-03 | | | | | |
|---|---|---|---|---|---|
| ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್‌ಗಳ ವಲಯವಾರು ವಿವರ ಈ ಕೆಳಕಂಡಂತಿದೆ. | | | | | |
| ಕ್ರಮ ಸಂಖ್ಯೆ | ವಲಯ | ವಿಧಾನ ಸಭಾ ಕ್ಷೇತ್ರದ ಹೆಸರು | ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್ ಹೆಸರು ಮತ್ತು ವಿಳಾಸ | ವಸೂಲಾಗಬೇಕಿರುವ ಒಟ್ಟು ತೆರಿಗೆ ಬಾಕಿ ಮೊತ್ತ | ಷರಾ |
| 1 | ಪಶ್ಚಿಮ | ಗಾಂಧಿನಗರ | ಅಭಿಷೇಕ್ ಡೆವಲಪರ್ಸ್, ನಂ.1, 2ನೇ ಮುಖ್ಯರಸ್ತೆ, ಮಲ್ಲೇಶ್ವರಂ (ಮಂತ್ರಿಮಾಲ್) | 14,53,88,586 | |
| 2 | ಬೊಮ್ಮನಹಳ್ಳಿ | ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ | ಮೀನಾಕ್ಷಿ ಮಾಲ್, ಹುಳಿಮಾವು ಬಿ ಜಿ ರಸ್ತೆ, ಬೆಂಗಳೂರು | 12,18,10,248 | ಸದರಿ ಸ್ವತ್ತಿಗೆ ಎಸ್.ಎ.ಎಸ್ ಅಡಿಯಲ್ಲಿ 2024-25 ನೇ ಸಾಲಿನ ವರಗೆ ಕಂದಾಯ ಪಾವತಿಯಾಗಿರುತ್ತದೆ. ಸದರಿ ಸ್ವತ್ತಿನ ಕಂದಾಯ ಪರಿಷ್ಕರಣೆ ಮಾಡಲಾಗಿದ್ದು, ನ್ಯಾಯಾಲಯದಲ್ಲಿ ದಾವೆಯಿರುತ್ತದೆ. ದಾವೆ ಸಂಖ್ಯೆ: 12439/2024 ರ ದಿನಾಂಕ: 24-07-2024 ರ ಆದೇಶದಂತೆ ಪರಿಷ್ಕರಿಸಿರುವ ಆಸ್ತಿ ತೆರಿಗೆ ಮೊತ್ತ ಬಾಕಿ ಇದ್ದು, ಬೇಡಿಕೆ ಪತ್ರಕ್ಕೆ ತಡೆಯಾಜ್ಞೆ ನೀಡಲಾಗಿರುತ್ತದೆ. |
| 3 | ಮಹದೇವಪುರ | ಮಹದೇವಪುರ | ಸೆಂಟ್ರಲ್ ಮಾಲ್ . 5/2 ಬೆಳ್ಳಂದೂರು ಮಾರತ್ತ್ ಹಳ್ಳಿ ಬೆಂಗಳೂರು | 2,32,79,540 | ಆಸ್ತಿ ತೆರಿಗೆ ಪಾವತಿಸಲು ದಿನಾಂಕ:04-11-2024 ರಂದು ಅಟ್ಯಾಚ್‌ಮೆಂಟ್ ಆದೇಶ ಜಾರಿ ಮಾಡಲಾಗಿರುತ್ತದೆ |
| ಒಟ್ಟು | | | | 29,04,78,374 | |

ವಿಶೇಷ ಆಯುಕ್ತರು (ಕಂದಾಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ